ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಹಿಂಬರಹ ಸಂಖ್ಯೆ: DOF-TECHOALL2/110/2022, E-800611. ದಿನಾಂಕ:19/08/2022**

## ಸುತ್ತೋಲೆ

**ವಿಷಯ:** ರೈತ ಮೀನುಗಾರ ಉತ್ಪಾದಕ ಸಂಸ್ಥೆ (FPOs)ಗಳಿಗೆ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ನೀಡುವ ಸಂಬಂಧ ಮಾರ್ಗಸೂಚಿ ಹೊರಡಿಸುವ ಬಗ್ಗೆ.

**ಉಲ್ಲೇಖ:** 1) ಸರ್ಕಾರದ ಸೇರ್ಪಡೆ ಆದೇಶ ಸಂಖ್ಯೆ: ಪಸಂಮೀ/ಇ-104/ಮೀಇಇ/2022 ದಿ.08/06/2022.
2) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-104 ಮೀಇಇ 2022, ಬೆಂಗಳೂರು ದಿನಾಂಕ:02/07/2022.

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (2) ರ ಆದೇಶದಲ್ಲಿ ಜಲಸಂಪನ್ಮೂಲದ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಮೂಲಕ ಮೀನುಗಾರರ ಸಹಕಾರ ಸಂಘಗಳಿಗೆ ನೀಡಿದ ನಂತರದ ಆದ್ಯತೆಯಲ್ಲಿ ಮೀನುಗಾರಿಕೆ ಇಲಾಖೆಯಿಂದ ಅನುಮತಿಸಲಾದ ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳಿಗೆ ನೀಡುವ ಸಂದರ್ಭದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಅನುಸರಿಸಲು ತಿಳಿಸಲಾಗಿದೆತ್ತು. ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳು (FPOs) ಸ್ಥಾಪಿತವಾದ ತಾಲ್ಲೂಕಿನಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ಪಡೆಯದೆ ಇತರೆ ತಾಲ್ಲೂಕಿನಲ್ಲಿ ಮೀನುಪಾಶುವಾರು ಹಕ್ಕು ಗುತ್ತಿಗೆ ಪಡೆಯಲು ಅರ್ಜಿ ಸಲ್ಲಿಸುತ್ತಿರುವುದು ಕಂಡು ಬಂದಿದ್ದು, ಈ ಬಗ್ಗೆ ಮಾರ್ಗದರ್ಶನ ನೀಡುವಂತೆ ಕೋರಿದ್ದರಿಂದ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ.

1. ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳು (FPOs) ಸ್ಥಾಪಿತವಾದ ತಾಲ್ಲೂಕಿಗೆ ಮಾತ್ರ ಸೀಮಿತವಾಗಿ ಆಯಾ ತಾಲ್ಲೂಕಿನಲ್ಲಿ ಗುತ್ತಿಗೆ ನಿಯಮಾವಳಿಯಂತೆ ಲಭ್ಯವಿರುವ ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ಗುತ್ತಿಗೆ ನೀಡತಕ್ಕದ್ದು.
2. ಸರ್ಕಾರದಿಂದ ನಿಗದಿಪಡಿಸಿರುವ ಗುರಿಯಂತೆ ಮೀನುಗಾರಿಕೆ ಇಲಾಖೆಯಿಂದ ಅನುದಾನ ಪಡೆದು ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳು (FPOs) ಗಳನ್ನು ವಿವಿಧ ಕಾಯ್ದೆಯಡಿ ಸ್ಥಾಪಿತವಾಗುತ್ತಿದ್ದು (ಕಂಪನಿ ಕಾಯ್ದೆ, ಟ್ರಸ್ಟ್ ಕಾಯ್ದೆ, ಇತ್ಯಾದಿ.,), ಮೀನುಗಾರಿಕೆ ಇಲಾಖೆಯಿಂದ ಅನುದಾನ ಪಡೆದು ಸ್ಥಾಪಿತವಾಗುತ್ತಿರುವ ಅಂತಹ ಎಲ್ಲಾ ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳಿಗೆ ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ಗುತ್ತಿಗೆ ನೀಡಲು ಪರಿಗಣಿಸತಕ್ಕದ್ದು.

3. ಒಂದೇ ಜಲಸಂಪನ್ಮೂಲಕ್ಕೆ ಮೀನುಪಾಶುವಾರು ಹಕ್ಕು ಗುತ್ತಿಗೆ ಕೋರಿ ಕ್ರ.ಸಂ. 1 ರಲ್ಲಿ ತಿಳಿಸಿರುವಂತೆ ಒಂದಕ್ಕಿಂತ ಹೆಚ್ಚು ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳು ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಂತಹ ರೈತ ಮೀನುಗಾರ ಉತ್ಪಾದಕ ಸಂಸ್ಥೆಗಳ ಮಧ್ಯೆ ಇ-ಟೆಂಡರ್ ನಡೆಸತಕ್ಕದ್ದು.

ಸಹಿ/-
ಮೀನುಗಾರಿಕೆ ನಿರ್ದೇಶಕರು

ಗೆ.
ಎಲ್ಲಾ ಮೀನುಗಾರಿಕೆ ಉಪನಿರ್ದೇಶಕರು
ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ
ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ
ಪ್ರತಿಯನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು, (ಶ್ರೇಣಿ-1) ಜಲಾಶಯ ಉಸ್ತುವಾರಿ ಅಧಿಕಾರಿಗಳು.

ಮೀನುಗಾರಿಕೆ ನಿರ್ದೇಶಕರ ಪರವಾಗಿ
19/8/22